## ನಿಮ್ಮೊಡನೆ

# ಲಿಂಗಪತ್ತೆ ಮತ್ತು ಭ್ರೂಣಹತ್ಯೆ ವಿರೋಧಿ ಆಂದೋಲನ ಕಾನೂನಿನೊಂದಿಗೆ ಸಂವೇದನೆಯೂ ಚುರುಕಾಗಬೇಕು

ಕುಟುಂಬ ವ್ಯವಸ್ಥೆಯಲ್ಲಿ ಗಂಡಿಗಿಂತಲೂ ಹೆಣ್ಣಿನ ಪಾತ್ರವೇ ಪ್ರಮುಖವಾಗಿದ್ದರೂ, ಹೆಣ್ಣುಮಕ್ಕಳನ್ನು ಹೊರೆ ಎಂದು ಭಾವಿಸುವ ಮನಸ್ಥಿತಿಯಲ್ಲಿ ಹೆಚ್ಚಿನ ಬದಲಾವಣೆ ಆದಂತಿಲ್ಲ. ಲಿಂಗಭೇದ ಮನೋಭಾವದಲ್ಲಿ ಬದಲಾವಣೆ ಆಗದ ಹೊರತು ಭ್ರೂಣಹತ್ಯೆಯಂಥ ಅನಾಗರಿಕ ನಡವಳಿಕೆಗಳು ಕೊನೆಗೊಳ್ಳುವುದು ಸಾಧ್ಯವಿಲ್ಲ.


ಈಶ್ವರ್

ರಾಜ್ಯದ ವಿವಿಧ ಭಾಗಗಳಲ್ಲಿ ಭ್ರೂಣಲಿಂಗ ಪತ್ತೆ ಹಾಗೂ ಗರ್ಭಪಾತ ಮಾಡುವ ಜಾಲವೊಂದು ಸಕ್ರಿಯವಾಗಿರುವುದು ಆತಂಕ ಮೂಡಿಸುವ ಸಂಗತಿ. ಲಿಂಗತಾರತಮ್ಯ ನಡೆಗೆ ಉತ್ತೇಜನ ನೀಡುವ ಈ ಚಟುವಟಿಕೆಗಳು, ಮಹಿಳೆಯರ ಆರೋಗ್ಯದ ಜೊತೆಗೆ ಹುಡುಗಾಟವನ್ನೂ ಆಡುತ್ತಿವೆ. ಜನರ ಜೀವ ಉಳಿಸಬೇಕಾದ ವೈದ್ಯ ವೃತ್ತಿಯನ್ನು ಜೀವ ತೆಗೆಯುವ ದಂಧೆಯನ್ನಾಗಿ ಮಾಡಿಕೊಂಡಿರುವುದನ್ನು ಕಲ್ಪಿಸಿಕೊಳ್ಳುವುದೇ ಅಸಹನೀಯ.

ಲಿಂಗಪತ್ತೆ ಮತ್ತು ಭ್ರೂಣಹತ್ಯೆಯ ದಂಧೆ, ಲಿಂಗಸಮಾನತೆಯ ಬಗ್ಗೆ ಜಾಗೃತಿ ಮೂಡಿಸಲು ಜಾರಿಯಲ್ಲಿರುವ ಸರ್ಕಾರಿ ಕಾರ್ಯಕ್ರಮಗಳ ಪರಿಣಾಮವನ್ನು ಅಣಕಿಸುವಂತಿದೆ; 'ಬೇಟಿ ಬಚಾವೊ'ದಂತಹ ಆಕರ್ಷಕ ಮಾತು ಘೋಷಣೆಯಾಗಿಯೇ ಉಳಿದಿರುವುದರ ನಿದರ್ಶನದಂತಿದೆ. ಭ್ರೂಣದ ಲಿಂಗ ಪತ್ತೆ ಮಾಡುವುದು ಹಾಗೂ ಹೆಣ್ಣೆಂದು ದೃಢಪಟ್ಟಲ್ಲಿ ಗರ್ಭಪಾತ ಮಾಡುವ ಅಮಾನವೀಯ ನಡವಳಿಕೆ ಈಗಲೂ ಚಾಲ್ತಿಯಲ್ಲಿರುವುದು ನಾಗರಿಕ ಸಮಾಜ ತಲೆ ತಗ್ಗಿಸುವಂತಹ ಸಂಗತಿ ಹಾಗೂ ಸಾಮಾಜಿಕ ಬದಲಾವಣೆ ಎನ್ನುವುದು ಕ್ರಮಿಸಬೇಕಾದ ದೂರದ ಹಾದಿ ಎನ್ನುವುದನ್ನು ಸೂಚಿಸುವಂತಿದೆ.

'ಗರ್ಭಧಾರಣೆಪೂರ್ವ ಮತ್ತು ಪ್ರಸವಪೂರ್ವ ಪತ್ತೆ ತಂತ್ರವಿಧಾನಗಳ (ಲಿಂಗ ಆಯ್ಕೆಯ ನಿಷೇಧ) ಅಧಿನಿಯಮ– 1994'ರ ಪ್ರಕಾರ ಭ್ರೂಣಲಿಂಗ ಪತ್ತೆ ಶಿಕ್ಷಾರ್ಹ ಅಪರಾಧ. ಆದರೂ, ಕಾಯ್ದೆಯಲ್ಲಿನ ಲೋಪದೋಷಗಳನ್ನು ಬಳಸಿಕೊಂಡು ಭ್ರೂಣಲಿಂಗ ಪತ್ತೆ ಮತ್ತು ಹೆಣ್ಣುಭ್ರೂಣ ಹತ್ಯೆ ಪ್ರಕರಣಗಳು ನಡೆಯುತ್ತಿವೆ. ಭ್ರೂಣಕ್ಕೆ 24 ವಾರಗಳು ತುಂಬುವವರೆಗೂ ಗರ್ಭಪಾತ ಮಾಡಿಸಿಕೊಳ್ಳಲು ಕಾನೂನಿನಲ್ಲಿ ಇರುವ ಅವಕಾಶವನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಲಿಂಗ ಪತ್ತೆ ಮತ್ತು ಭ್ರೂಣಹತ್ಯೆಗೆ ಕಡಿವಾಣ ಹಾಕಬೇಕಾದ ಆರೋಗ್ಯ ಇಲಾಖೆಯ ತೂಕಡಿಕೆಯೂ ಕಾನೂನುಬಾಹಿರ ಚಟುವಟಿಕೆಗಳು ನಡೆಯಲಿಕ್ಕೆ ಕಾರಣವಾಗಿವೆ.

ಬಾಗಲಕೋಟೆ ಜಿಲ್ಲೆಯ ಜಮಖಂಡಿಯಲ್ಲಿ ಎಸ್‌ಎಸ್‌ಎಲ್‌ಸಿ ಓದಿರುವ ಮಹಿಳೆಯೊಬ್ಬಳು ವೈದ್ಯೆಯ ಹೆಸರಿನಲ್ಲಿ ಅನಧಿಕೃತ ಹೆರಿಗೆ ಆಸ್ಪತ್ರೆ ನಡೆಸುತ್ತಿದ್ದುದಾಗಿ ವರದಿಯಾಗಿದೆ. ಬೆಂಗಳೂರು, ರಾಮನಗರ, ಮಂಡ್ಯ, ಮೈಸೂರಿನಲ್ಲಿ ಸಕ್ರಿಯವಾಗಿದ್ದ ಜಾಲವೊಂದು ಕಳೆದ ಮೂರು ವರ್ಷಗಳಲ್ಲಿ 650ಕ್ಕೂ ಹೆಚ್ಚು ಭ್ರೂಣಲಿಂಗ ಪತ್ತೆ ಮಾಡಿರುವ ಹಾಗೂ 200ಕ್ಕೂ ಹೆಚ್ಚು ಹೆಣ್ಣು ಭ್ರೂಣಗಳ ಹತ್ಯೆ ಮಾಡಿರುವ ಸಂಗತಿ ತನಿಖೆಯಿಂದ ಬಯಲಾಗಿದೆ.

ಮಂಡ್ಯ ಜಿಲ್ಲೆಯ 32ಕ್ಕೂ ಹೆಚ್ಚು ಸಗಟು ಔಷಧಿ ಮಳಿಗೆಗಳಲ್ಲಿ, ಗರ್ಭಪಾತಕ್ಕೆ ಬಳಸುವ ಸಾವಿರಾರು 'ಎಂಟಿಪಿ ಕಿಟ್'ಗಳನ್ನು ಕೇವಲ ಒಂದು ವರ್ಷದ ಅವಧಿಯಲ್ಲಿ ಮಾರಾಟ ಮಾಡಲಾಗಿತ್ತು. ಪ್ರಕರಣ ಬೆಳಕಿಗೆ ಬಂದ ಮೇಲೆ ಈ ಕಿಟ್‌ಗಳ ಮಾರಾಟಕ್ಕೆ ಜಿಲ್ಲೆಯಲ್ಲಿ ನಿರ್ಬಂಧ ವಿಧಿಸಲಾಯಿತಾದರೂ, ಹೊರ ಜಿಲ್ಲೆಗಳ ಔಷಧಿ ಅಂಗಡಿಗಳಿಂದ ಕಿಟ್ ಖರೀದಿಸಿ ತಂದು ಭ್ರೂಣಹತ್ಯೆ ನಡೆಸಲಾಗುತ್ತಿತ್ತು ಎನ್ನಲಾಗಿದೆ. ಕಿಟ್‌ಗಳ ಮಾರಾಟಕ್ಕೆ ಸಂಬಂಧಿಸಿದಂತೆ ಏಕರೂಪ ಸಂಹಿತೆ ಇಲ್ಲದಿರುವುದರ ಲಾಭವನ್ನು ಕಾನೂನುಬಾಹಿರ ಕೃತ್ಯಗಳಲ್ಲಿ ಭಾಗಿಯಾದವರು ಬಳಸಿಕೊಳ್ಳುತ್ತಿದ್ದರು. ರಾಜ್ಯದ ಗಮನಸೆಳೆದ ಈ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿತ್ತು. ಲಿಂಗಪತ್ತೆ ಪರೀಕ್ಷೆ ನಡೆಸಿ ಹೆಣ್ಣು ಭ್ರೂಣಹತ್ಯೆ ನಡೆಸಿದ ಪ್ರಕರಣಗಳ ಬಗ್ಗೆ ತನಿಖೆ ನಡೆಸಿದ್ದ ಸಿಐಡಿ, ಆರೋಗ್ಯ ಇಲಾಖೆಗೆ ವರದಿ ಸಲ್ಲಿಸಿ ಒಂದೂವರೆ ತಿಂಗಳಾದರೂ ನ್ಯಾಯಾಲಯದಲ್ಲಿ ದೂರು ದಾಖಲಾಗಿರಲಿಲ್ಲ. ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ ಕೆಲವು ಆರೋಪಿಗಳು ಪಾಂಡವಪುರದಲ್ಲಿರುವ ಆರೋಗ್ಯ ಇಲಾಖೆಯ ವಸತಿ ಗೃಹವೊಂದರಲ್ಲಿ ತಮ್ಮ ಕೃತ್ಯ ಮುಂದುವರಿಸಿದ್ದುದರ ಬಗ್ಗೆ ಪತ್ರಿಕೆಯಲ್ಲಿ ವರದಿ ಪ್ರಕಟವಾಗುವವರೆಗೂ ಸಂಬಂಧಿಸಿದ ಅಧಿಕಾರಿಗಳು ಎಚ್ಚೆತ್ತುಕೊಂಡಿರಲಿಲ್ಲ. ಇಂಥ ಸಂವೇದನಾಶೂನ್ಯ ನಡವಳಿಕೆ ಹಾಗೂ ಕರ್ತವ್ಯಲೋಪ ಕೂಡ ವೈದ್ಯಕೀಯ ವೃತ್ತಿಯನ್ನು ದಂಧೆಯನ್ನಾಗಿ ಬಳಸಿಕೊಳ್ಳುವವರಿಗೆ ಉತ್ತೇಜನ ನೀಡುವಂತಿದೆ.

ಕುಟುಂಬ ವ್ಯವಸ್ಥೆಯಲ್ಲಿ ಗಂಡಿಗಿಂತಲೂ ಹೆಣ್ಣಿನ ಪಾತ್ರವೇ ಪ್ರಮುಖವಾಗಿದ್ದರೂ, ಹೆಣ್ಣುಮಕ್ಕಳನ್ನು ಹೊರೆ ಎಂದು ಭಾವಿಸುವ ಮನಸ್ಥಿತಿಯಲ್ಲಿ ಹೆಚ್ಚಿನ ಬದಲಾವಣೆಯೇನೂ ಆದಂತಿಲ್ಲ. ಹೆಣ್ಣುಮಕ್ಕಳ ಬಗೆಗಿನ ಪಕ್ಷಪಾತದ ಧೋರಣೆ ಕುಟುಂಬದೊಳಗೆ ಮಾತ್ರವಲ್ಲದೆ, ಸಮಾಜದಲ್ಲೂ ಇದೆ. ಸರ್ಕಾರಿ ವ್ಯವಸ್ಥೆಯಲ್ಲಿಯೂ ಲಿಂಗಸಮಾನತೆ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಂಡಿಲ್ಲ. ಹೆಣ್ಣಿನ ಕುರಿತ ಪೂರ್ವಗ್ರಹ ಮನೋಭಾವ, ಹೆಣ್ಣು–ಗಂಡಿನ ಲಿಂಗಾನುಪಾತದಲ್ಲಿ ಕುಸಿತಕ್ಕೆ ಕಾರಣವಾಗಿದೆ. 2011ರ ಜನಗಣತಿ ಪ್ರಕಾರ, ಪ್ರತಿ ಸಾವಿರ ಪುರುಷರಿಗೆ ಇರುವ ಮಹಿಳೆಯರ ಪ್ರಮಾಣ 918 ಮಾತ್ರ. ಲಿಂಗಾನುಪಾತದಲ್ಲಿನ ವ್ಯತ್ಯಾಸ ಸಮಾಜದ ಅನಾರೋಗ್ಯದ ದ್ಯೋತಕ.

ಲಿಂಗಭೇದ ಮನೋಭಾವದಲ್ಲಿ ಬದಲಾವಣೆ ಆಗದ ಹೊರತು ಲಿಂಗಪತ್ತೆ ಮತ್ತು ಭ್ರೂಣಹತ್ಯೆಯಂಥ ಅನಾಗರಿಕ ನಡವಳಿಕೆಗಳು ಕೊನೆಗೊಳ್ಳುವುದು ಸಾಧ್ಯವಿಲ್ಲ. ವೈಯಕ್ತಿಕ ಹಾಗೂ ಸಾರ್ವತ್ರಿಕ ನೆಲೆಯಲ್ಲಿ ಲಿಂಗಸಮಾನತೆಯ ಅರಿವನ್ನು ಮೂಡಿಸುವ ಕೆಲಸಗಳು ವ್ಯಾಪಕವಾಗಿ ನಡೆಯಬೇಕಾಗಿದೆ. ಇದರ ಜೊತೆಗೆ, ಕಾನೂನಿನ ಪರಿಣಾಮಕಾರಿ ಬಳಕೆಯಿಂದ ಹೆಣ್ಣು ಭ್ರೂಣಹತ್ಯೆ ವಿರುದ್ಧದ ಆಂದೋಲನವನ್ನು ಬಲಪಡಿಸಬೇಕಾಗಿದೆ.

■ ರಘುನಾಥ ಚ.ಹ.